ಶ್ರೀ ಬಿ. ಸೋಮಶೇಖರ್: ಮಧ್ಯದಲ್ಲಿ ಅರ್ಧಗಂಟೆ ಅವಕಾಶ ಕೊಡಿ. ಇದು ನನ್ನ ಒಬ್ಬನ ಪ್ರಶ್ನೆಯಲ್ಲ. ಇಡೀ ಸದನದ ಸದಸ್ಯರ ಗೌರವರದ ಪ್ರಶ್ನೆ. ಸದಸ್ಯರ ಮಾನ ಮರ್ಯಾದೆ ಪ್ರಶ್ನೆ.

ಅಧ್ಯಕ್ಷರು: ನಾಳೆ ಬೆಳಿಗ್ಗೆ 9 ಗಂಟೆಗೆ ಬಜೆಟ್ ಮೇಲೆ ಉತ್ತರ ಇದೆ. 2 ಗಂಟೆಯ ನಂತರ ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆ ಎಲ್ಲಾ ಇರುತ್ತದೆ. ಆಗ ತಾವು ಮುಂದುವರಿಸಿ.

ಶ್ರೀ ಬಿ. ಸೋಮಶೇಖರ್: ಬಜೆಟ್ ಮೇಲೆ ಉತ್ತರ ಕೊಡುವುದಕ್ಕೆ ಮುಂಚೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇನೆ. ನಿನ್ನೆ ಮಂತ್ರಿಗಳು ಇರಲಿಲ್ಲ, ಇವತ್ತು ತೆಗೆದುಕೊಳ್ಳುವುದಕ್ಕೆ ತೊಂದರೆ ಏನು? ಮಾತನಾಡುವವರು ಮಾತನಾಡಲಿ. ಉತ್ತರ ಕೊಟ್ಟ ಮೇಲೆ ನಾವು ಹೇಳಿ ಪ್ರಯೋಜನವಾಗುವುದಿಲ್ಲ. ಇವತ್ತು ದಯವಿಟ್ಟು ನಮಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ನಿಮ್ಮದು ಬೇಕಾದರೆ ನಾಳೆ ತೆಗೆದುಕೊಳ್ಳಬಹುದು. ಮಾತನಾಡುವವರು ನಾಳೆ ಮಾತನಾಡುವುದಕ್ಕೆ ಆಗುವುದಿಲ್ಲ. ನಾನು ಖಂಡಿತಾ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್: ಉತ್ತರ ಕೊಡುವುದಕ್ಕೆ ಮುಂಚೆ ಅವಕಾಶ ಕೊಡಿ.

ಅಧ್ಯಕ್ಷರು: ನಾಳೆ ರಿಪ್ಲೈಗೆ ಮೊದಲು ಯಾವುದೂ ಇಲ್ಲವೇ ಇಲ್ಲ. ನಾಳೆ 9 ಗಂಟೆಗೆ ರಿಪ್ಲೈ ಇದೆ. ಆಮೇಲೆ ಉಳಿದ ವಿಚಾರ. ಉತ್ತರ ಕೊಟ್ಟ ಮೇಲೆ ಪ್ರಶ್ನೋತ್ತರ ವೇಳೆ ಗಮನ ಸೆಳೆಯುವ ಸೂಚನೆ, ಶೂನ್ಯವೇಳೆ ಎಲ್ಲಾ ಬರುತ್ತದೆ. ಮಾತನಾಡತಕ್ಕ ಸದಸ್ಯರಿಗೆ ಅನುಕೂಲ ಮಾಡಿ ಕೊಡೋಣವೆಂಬ ಆಷ್ಟೆ. ಬೇರೇನೂ ಇಲ್ಲ.

ಶ್ರೀ ಬಿ. ಸೋಮಶೇಖರ್: ಉತ್ತರ ಆದಮೇಲೆ ತಕ್ಷಣ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಆಗಬಹುದು, ತೆಗೆದುಕೊಳ್ಳುತ್ತೇನೆ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:- (ಅ) ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯಡಿಯಲ್ಲಿನ ಫಲಾನುಭವಿಗಳ ವಸತಿ ನಿರ್ಮಾಣಕ್ಕೆ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಆಶ್ರಯ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ವಸತಿ ಯೋಜನೆ ಅಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ವಸತಿ ನಿರ್ಮಾಣಕ್ಕೆ ಮಂಜೂರಾತಿ ನೀಡಿದಾಗ ಅಂತಹ ಫಲಾನುಭವಿಗಳು ತಮಗೆ ಸೇರಿದ ಹಿಡುವಳಿ ಕಂದಾಯ ಜಮೀನಿನಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಅನುಸರಿಸಬೇಕಾಗುತ್ತಿರುವ ಕಾನೂನು ಕ್ರಮಗಳಿಂದ ಉಂಟಾಗುತ್ತಿರುವ ತೊಂದರೆ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಪಿ. ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ವಸತಿ ನಿರ್ಮಾಣಕ್ಕೆ ಮಂಜೂರಾತಿ ನೀಡಿದಾಗ ಅಂತಹ ಫಲಾನುಭವಿಗಳು ತಮಗೆ ಸೇರಿದ ಹಿಡುವಳಿ ಜಮೀನಿನಲ್ಲಿ ಮನೆ ನಿರ್ಮಿಸಿಕೊಳ್ಳಲು ಸಂಬಂಧಿಸಿದ ಹಿಡುವಳಿ ಜಮೀನನ್ನು 1964ರ ಕರ್ನಾಟಕ ಭೂಕಂದಾಯ ಅಧಿನಿಯಮದ ಕಲಂ 95ರ ಅಡಿಯಲ್ಲಿ ಭೂ ಪರಿವರ್ತನೆ ಮಾಡಿಸಿಕೊಳ್ಳಬೇಕಾಗಿರುತ್ತದೆ ಮತ್ತು ಭೂ ಪರಿವರ್ತನೆಗೆ 1966ರ ಕರ್ನಾಟಕ ಭೂ ಕಂದಾಯ ನಿಯಮಗಳು ನಿಯಮ 107ರ ಅಡಿ ನಿಗಧಿಪಡಿಸಿರುವ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಬೇಕಾಗಿರುತ್ತದೆ. ಇದಾದ ನಂತರ ಸಂಬಂಧಪಟ್ಟ ನಗರಸಭೆ : ಪುರಸಭೆ : ಗ್ರಾಮ ಪಂಚಾಯಿತಿಗಳಿಂದ ಮನೆ ಕಟ್ಟಲು ಪರವಾನಗೆ ಪಡೆಯಬೇಕಾಗಿರುತ್ತದೆ. ಭೂ ಪರಿವರ್ತನೆ: ಪರಿವರ್ತನಾ ಶುಲ್ಕದ ವಿಷಯವು ಕಂದಾಯ ಇಲಾಖೆಯ ವ್ಯಾಪ್ತಿಗೂ, ಪರವಾನಗಿ ಪಡೆಯುವ ವಿಷಯವು ನಗರಾಭಿವೃದ್ಧಿ ಇಲಾಖೆ : ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಗಳಿಗೆ ಬರುತ್ತದೆ. ಭೂ ಪರಿವರ್ತನೆಗೆ ಸ್ವೀಕರಿಸಲಾಗುವ ಅರ್ಜಿಗಳನ್ನು 45 ದಿನಗಳ ಒಳಗಾಗಿ ವಿಲೇಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆರ್‌ಡಿ 7 ಎಲ್‌ಜಿಪಿ 95 ಸಂಖ್ಯೆಯ 07-6-1999 ದಿನಾಂಕದ ಸುತ್ತೋಲೆಯಲ್ಲಿ ಸೂಚನೆಯನ್ನು ನೀಡಲಾಗಿದೆ.

+ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ಗಮನ ಸೆಳೆಯಲು ಈ ಸೂಚನೆಯನ್ನು ಏನು ನಾನು ಕೊಟ್ಟಿದ್ದೇನೆ, ನನ್ನ ಉದ್ದೇಶವಾದರೂ ಇಷ್ಟೇ. ಈ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯಲ್ಲಿ ನಾವು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅತ್ಯಂತ ಬಡವರು, ಕಡುಬಡವರನ್ನು ಆಯ್ಕೆ ಮಾಡುತ್ತಿದ್ದೇವೆ. ಸಣ್ಣ ರೈತರು, ಅತಿ ಸಣ್ಣ ರೈತರು ಕೂಡ ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಈಗ ಏನು ತೊಂದರೆಯಾಗುತ್ತಿದೆ ಎಂದರೆ, ಎರಡು ಗುಂಟೆ, ಮೂರು ಗುಂಟೆ, ಐದು ಗುಂಟೆ ಕಂದಾಯ ಜಮೀನುಗಳನ್ನು ಏನು ಇಟ್ಟುಕೊಂಡಿರುತ್ತಾರೆ ಅವರಿಗೆ ಯಾವ ಮನೆಯೂ ಇರುವುದಿಲ್ಲ, ಸೈಟೂ ಇರುವುದಿಲ್ಲ. ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿದಂಥ ಸಂದರ್ಭದಲ್ಲಿ ಅವರಿಗೆ ಕಾನೂನು ಏನು ಹೇಳುತ್ತದೆ ಎಂದರೆ, ಈಗ ನಮ್ಮ 95ನೇ ಲ್ಯಾಂಡ್ ರೆವಿನ್ಯೂ ಆಕ್ಟ್ ಏನು ಇದೆ ಅದರ ಪ್ರಕಾರ ಅವನು ಆ ಲ್ಯಾಂಡನ್ನು ವ್ಯವಸಾಯೇತರ ಉದ್ದೇಶಕ್ಕೋಸ್ಕರ ಕನ್ವರ್ಶನ್ ಮಾಡಿಸಿಕೊಳ್ಳಲೇಬೇಕು. ಅದಕ್ಕೆ ಈ 95ರ ಕಾಯಿದೆ ಪ್ರಕಾರ ಅವನು ನಾಲ್ಕು ತಿಂಗಳು ಕಾಯಬೇಕು. ಇದರ ಜೊತೆಗೆ ಭೂ ಪರಿವರ್ತನೆಗೆ ಬೇಕಾದ ಹಣವನ್ನೂ ಕಟ್ಟಬೇಕು. ಅವನು ಒಬ್ಬ ಕಡುಬಡವನಾಗಿರುತ್ತಾನೆ. ಎರಡು-ಮೂರು ಗುಂಟೆ ಜಮೀನಷ್ಟೇ ಇಟ್ಟುಕೊಂಡಿರತಕ್ಕಂಥ ಅತೀ ಸಣ್ಣ ರೈತರಿಗೆ ನಾವು ಆಶ್ರಯ, ಅಂಬೇಡ್ಕರ್ ಯೋಜನೆಯಲ್ಲಿ ಮನೆ ಕೊಟ್ಟಾಗ ಜಿಲ್ಲಾಧಿಕಾರಿಗಳ ಕಚೇರಿಗೆ ಅಥವಾ ತಾಲ್ಲೂಕು ಕಚೇರಿಗೆ ತಿಂಗಳುಗಟ್ಟಲೆ ಅಲೆಯಬೇಕಾಗುತ್ತದೆ. ನನ್ನ ಉದ್ದೇಶ ಏನೆಂದರೆ, ನಾವು ಅತಿ ಬಡವರನ್ನು ಗುರುತಿಸಿ ಫಲಾನುಭವಿಗಳನ್ನಾಗಿ ಈ ವಸತಿ ಯೋಜನೆಯಲ್ಲಿ ಏನು ಆಯ್ಕೆ ಮಾಡಿರುತ್ತೇವೆ ಅವರನ್ನು ಈ ಕಚೇರಿಗಳಿಗೆ ತಿರುಗಿಸತಕ್ಕಂಥ ವ್ಯವಸ್ಥೆ ಬೇಡ. ಅದಕ್ಕೆ ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ 95ನೇ ಸೆಕ್ಷನ್ ಏನಿದೆ, ಅದಕ್ಕೆ ಒಂದು ತಿದ್ದುಪಡಿಯನ್ನು ತಂದು, ನಾವು

ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾಗಿ ಅವರನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಅವರ ಹಿಂದುಳಿ ಕಂದಾಯ ಜಮೀನಿನಲ್ಲಿ ಮನೆ ಕಟ್ಟತಕ್ಕಂಥ ಸಂದರ್ಭದಲ್ಲಿ ಅವರು 95ರ ಅಡಿಯಲ್ಲಿ ಭೂ ಪರಿವರ್ತನೆ ಮಾಡತಕ್ಕಂಥ ಅವಶ್ಯಕತೆ ಇಲ್ಲವೆಂದು ಒಂದು ತಿದ್ದುಪಡಿಯನ್ನು ತರಬೇಕೆಂದು ನನ್ನ ಉದ್ದೇಶ. ಇದು ಬಡವರಿಗೆ ಅನುಕೂಲವಾಗಿರತಕ್ಕಂಥ ತಿದ್ದುಪಡಿಯಾಗುತ್ತದೆ. ನಾನು ಅನೇಕ ಸಲ ಫಲಾನುಭವಿಗಳನ್ನು ಆಯ್ಕೆ ಮಾಡಿದರೂ ಕೂಡ ಈ ಕಾನೂನಿನ ಜಂಜಾಟದಲ್ಲಿ ಅವನು ಸಿಕ್ಕಿಹಾಕಿಕೊಂಡು ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ನಾವು ಮಾಡಿದ ಫಲಾನುಭವಿಗಳ ಆಯ್ಕೆಯನ್ನು ರದ್ದುಮಾಡಿ ಪುನಃ ಬೇರೆಯವರಿಗೆ ಕೊಟ್ಟಿರತಕ್ಕಂಥ ಸಂದರ್ಭಗಳು ಅನೇಕ ಇವೆ. ಆದ್ದರಿಂದ ಈ ಬಡವರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಆಗುತ್ತಾ ಇರತಕ್ಕಂಥ ಕಷ್ಟವನ್ನು ದೃಷ್ಟಿಯಲ್ಲಿಟ್ಟು ನಾನು ಮಾನ್ಯ ಸಚಿವರನ್ನು ಬೇಡುವುದು ಏನೆಂದರೆ ಸೆಕ್ಷನ್ 95ಕ್ಕೆ ಒಂದು ಸೂಕ್ತವಾದ ತಿದ್ದುಪಡಿಯನ್ನು ತಂದು ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ವಸತಿ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಅವನು ಭೂಪರಿವರ್ತನೆಗೆ ಅರ್ಜಿ ಹಾಕುವ ಅಗತ್ಯವಿಲ್ಲ. ಭೂಪರಿವರ್ತನೆ ಮಾಡಿಕೊಳ್ಳಬೇಕಾಗಿಲ್ಲ ಎಂದು ಹೇಳಬೇಕು. ನೇರವಾಗಿ ಆಶ್ರಯ ಯೋಜನೆಯಡಿಯಲ್ಲಿ ಅವನಿಗೆ ಮಂಜೂರಾತಿ ಪತ್ರ ಕೊಟ್ಟರೆ ಅದರ ಆಧಾರದ ಮೇಲೆ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಅವಕಾಶ ಕೊಡತಕ್ಕಂಥ ತಿದ್ದುಪಡಿಯನ್ನು ಮಾನ್ಯ ಕಂದಾಯ ಸಚಿವರ ತರಬೇಕೆಂದು ನಮ್ಮ ಆಗ್ರಹ ಇದೆ. ಇದರ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

+ ಶ್ರೀ ಆರ್. ನಾರಾಯಣ (ಬೆಳ್ಳಾವಿ): ಮಾನ್ಯ ಸಭಾಧ್ಯಕ್ಷರೇ, ಇದು ಒಂದು ಬಹಳ ಗಂಭೀರವಾದ ಮತ್ತು ಪ್ರಾಮುಖ್ಯವಾದ ವಿಚಾರ. ಬಹುಶಃ ಇಲ್ಲಿ ಇರತಕ್ಕಂಥ ಎಲ್ಲ ಶಾಸಕರಿಗೂ ಸಹ ಅನುಭವ ಆಗಿದೆ. ನಾವು ಆಶ್ರಯ ಫಲಾನುಭವಿಗಳಿಗೆ ಮನೆಗಳನ್ನು ಕೊಡುವ ಸಂದರ್ಭದಲ್ಲಿ ಬಹಳಷ್ಟು ಜನರಿಗೆ ನಿವೇಶನ ಇರುವುದಿಲ್ಲ. ನಿವೇಶನ ಇರಬೇಕು ಎಂದು ನಿಯಮ ಇದ್ದರೂ ಸಹ ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿಬಿಡುತ್ತೇವೆ. ಆದಾದ ನಂತರ ನಮಗೆ ಏನು ಗೊತ್ತಾಗುತ್ತದೆ ಅಂದರೆ ನಿವೇಶನ ಅವರಿಗೆ ಆಶ್ರಯ ಸಮಿತಿಯಿಂದ ಕೊಡುವುದಿಲ್ಲ ಎಂದು. ಅವರಿಗೆ ಊರಪಕ್ಕದಲ್ಲಿ, ಪಾಪುಪಾಸಿನಲ್ಲಿ ಅರ್ಧಕಿಲೋಮೀಟರ್, ಕಾಲು ಕಿಲೋಮೀಟರ್ ದೂರದಲ್ಲಿ ಇರುವ ಸಣ್ಣ ಹಿಂದುಳಿ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಬೇಕಾದದ್ದು ತೀರಾ ಅವಶ್ಯಕತೆ ಇದೆ. ಈ ದೃಷ್ಟಿಯಿಂದ 95ರ ಭೂಕಂದಾಯ ಕಾನೂನಿನ ಸೆಕ್ಷನ್ ಅಡಿಯಲ್ಲಿ ಅವರಿಗೆ ಭೂಪರಿವರ್ತನೆ ಮಾಡಿಕೊಳ್ಳುವುದರಲ್ಲಿ ಈ ಸಮಸ್ಯೆ ಇದೆ. ನಾವು ಮನೆಗಳನ್ನು ಕೊಡತಕ್ಕಂಥದ್ದು ಬಡವರಿಗೆ ಮತ್ತು ಕಡುಬಡವರಿಗೆ. ಯಾರು ಬಡತನ ರೇಖೆಯಿಂದ ಕೆಳಗಿರುತ್ತಾರೆ ಅವರಿಗೆ ನಾವು ಮನೆಗಳನ್ನು ಕೊಡುತ್ತೇವೆ. ಆದರೆ ಈಗಿನ ಕಾನೂನಿನಲ್ಲಿ ಆತ ತನ್ನ ಭೂಮಿಯನ್ನು ಪರಿವರ್ತನೆ ಮಾಡಿಕೊಳ್ಳುವುದು ಅವಶ್ಯಕತೆ ಇರುವುದರಿಂದ, ಇದಕ್ಕಾಗಿ ಆತ ಹತ್ತು-ಹನ್ನೆರಡು ಎನ್.ಓ.ಸಿ. ಗಳನ್ನು ಕೊಡಬೇಕಾಗುತ್ತದೆ. ವ್ಯವಸಾಯೇತರ ಭೂಪರಿವರ್ತನೆ ಆಗಬೇಕಾದರೆ ಎಷ್ಟು ಕಷ್ಟ ಇದೆಯೆಂದು ತಮಗೆ ಗೊತ್ತಿದೆ. ಅದರಲ್ಲೂ ಈ ಕಡುಬಡವರು ತಹಸೀಲ್ದಾರರ ಕಚೇರಿಗೆ ಬಹಳಷ್ಟು ಸಲ

ಅಲೆಯ ಬೇಕಾಗುತ್ತದೆ. ನ್ಯಾಷನಲ್ ಹೈವೇಯಿಂದ ಎನ್.ಓ.ಸಿ. ಕೊಡಬೇಕು ಮತ್ತು ಬೇರೆ ಬೇರೆ ಎನ್.ಓ.ಸಿ.ಗಳನ್ನು ಕೊಡಬೇಕಾಗುತ್ತದೆ. ಇವೆಲ್ಲಾ ಕಷ್ಟಗಳು ಇರುವುದರಿಂದ 30X40 ಅಡಿ ಜಾಗವನ್ನು ಪರಿವರ್ತನೆ ಮಾಡಿಕೊಳ್ಳಬೇಕಾದರೆ ಅವನಿಗೆ ಆಸಕ್ತಿ ಇರುವುದಿಲ್ಲ ಮತ್ತು ಆತ ತಲೆಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ತನಗೆ ಸೈಟು ಇಲ್ಲವೆಂದು ಅವನು ಸುಮ್ಮನೆ ಇರುತ್ತಾನೆ. ಇದರಿಂದ ನಮಗೆ ಮತ್ತೆ ಅದನ್ನು ಬೇರೆಯವರಿಗೆ ಕೊಡಬೇಕಾದ ಸಮಸ್ಯೆ ಉದ್ಭವವಾಗುತ್ತದೆ. ಆದ್ದರಿಂದ ಇದನ್ನು ಮಾನವೀಯತೆ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. 45 ದಿವಸಗಳಲ್ಲಿ ಭೂಪರಿವರ್ತನೆ ಮಾಡಬೇಕೆಂದು ಕಾನೂನಿನಲ್ಲಿದೆ. ಆದರೆ 45 ದಿವಸಗಳಲ್ಲಿ ಇದು ಸಾಧ್ಯವಾಗುವುದಿಲ್ಲ. ಇದಕ್ಕೆ ಶುಲ್ಕ ಬೇರೆ ಕಟ್ಟಬೇಕಾಗುತ್ತದೆ. ಆದ್ದರಿಂದ ಬಡವರಿಗೊಂದು ಸೂರು ಕೊಡತಕ್ಕಂಥ ನಮ್ಮ ಸರ್ಕಾರದ ಜನಪ್ರಿಯ ಕಾರ್ಯಕ್ರಮ ಇದಾಗಿರುವುದರಿಂದ, ಇದು ಯಶಸ್ವಿಯಾಗಬೇಕಾದರೆ ಸೆಕ್ಷನ್ 95ಕ್ಕೆ ಕಡ್ಡಾಯವಾಗಿ ಭೂಪರಿವರ್ತನೆಯಾಗಬೇಕೆಂದು ಏನು ಷರತ್ತು ಇಡೆ, ಅದನ್ನು ತೆಗೆದು ಆಟೋಮ್ಯಾಟಿಕ್ ಆಗಿ 'ಡೀಮ್ಡ್ ಟುಬಿ ಕನ್ವರ್ಟೆಡ್' ಎನ್ನುವ ತರಹ ಮನೆಯನ್ನು ಮಂಜೂರು ಮಾಡುತ್ತಿದ್ದ ಹಾಗೆ ಹಿಡುವಳಿ ಜಮೀನಿನಲ್ಲಿ ಭೂಪರಿವರ್ತನೆ ಇಲ್ಲದೇನೇ ನೇರವಾಗಿ ಮನೆ ಕಟ್ಟತಕ್ಕಂಥ ಒಂದು ಸೌಕರ್ಯವನ್ನು ಕಲ್ಪಿಸಿಕೊಡಲು ಸೂಕ್ತ ತಿದ್ದುಪಡಿಯನ್ನು ತಂದು ಮಾನ್ಯ ಕಂದಾಯ ಸಚಿವರು ಬಡವರ ಸಂಕಷ್ಟಕ್ಕೆ ನೆರವಾಗಬೇಕೆಂದು ನಾನು ಎಲ್ಲಾ ಬಡವರ ಪರವಾಗಿ ಮತ್ತು ಸದಸ್ಯರ ಪರವಾಗಿ ಮಾನ್ಯ ಮಂತ್ರಿಗಳಿಗೆ ಕಳಕಳಿಯಿಂದ ಮನವಿ ಮಾಡುತ್ತೇನೆ.

+ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಸಭಾಧ್ಯಕ್ಷರೇ, ನಮ್ಮ ಸ್ನೇಹಿತರಾದ ಮುದ್ದಹನುಮೇಗೌಡರು ಮತ್ತು ನಾರಾಯಣರವರ ಮಾತಿಗೆ ಪೂರಕವಾಗಿ ನನ್ನದೂ ಒಂದು ಸಲಹೆ ಇದೆ. ಇವತ್ತು ನಾವು ಏನು ಕಾರ್ಯಕ್ರಮವನ್ನು ತಂದಿದ್ದೇವೆ, ಅದು ಆಶ್ರಯ ಇರಬಹುದು, ಅಂಬೇಡ್ಕರ್ ಇರಬಹುದು ಇಂದಿರಾ ಆವಾಸ್ ಇರಬಹುದು. ಈ ಕಾರ್ಯಕ್ರಮವನ್ನು ತಂದಿರುವುದು ಬಡವರಿಗೋಸ್ಕರ. ಇದನ್ನು ಟಾಟಾ, ಬಿರ್ಲಾ ಮುಂತಾದವರು ಕೇಳುವುದಕ್ಕೆ ಬರುವುದಿಲ್ಲ. ಈ ಯೋಜನೆ ಕಡುಬಡವರಿಗಿದ್ದು ಇವರಲ್ಲಿ ಜಾತಿಮತಗಳು ಇಲ್ಲ. ಪಕ್ಷಭೇದ ಇಲ್ಲ. ಆದ್ದರಿಂದ ಇದು ಬಡವರಿಗೋಸ್ಕರ ತಂದಿರತಕ್ಕಂಥ ಒಂದು ಯೋಜನೆ. ಆದ್ದರಿಂದ ಕಾನೂನಿನ ಅಡಿಯಲ್ಲಿ ಬಡವರಿಗೆ ವಂಚನೆ ಮಾಡುವುದು ಸೂಕ್ತವಲ್ಲ. ಈಗ ತಮಗೆ ಗೊತ್ತಿರುವ ಹಾಗೆ ಕಾನೂನು ಎನ್ನುವುದು ಸಾಮಾನ್ಯವಾಗಿ ರಬ್ಬರ್ ಇದ್ದಹಾಗೆ. ಬಡವರಿಗೋಸ್ಕರ ಇವುಗಳು ಇರುವಾಗ ಪ್ರತಿಯೊಂದು ಆಕ್ಟ್ ಅಥವಾ ಸೆಕ್ಷನ್‌ಗೆ ಒಂದು ಎಕ್ಸೆಂಪ್‌ಷನ್ ಕ್ಲಾಸ್ ಇದ್ದೇ ಇರುತ್ತದೆ. ಈಗಾಗಲೇ ನಮಗೆ ಗೊತ್ತಿರುವ ಹಾಗೆ ನಮ್ಮ ಭಾರತದ ಸಂವಿಧಾನಕ್ಕೆ 80-82 ತಿದ್ದುಪಡಿಗಳನ್ನು ಮಾಡಲಾಗಿದೆ. ಅದೇ ರೀತಿ ನಮ್ಮ ಈ ಕಾನೂನಿನ ಸೆಕ್ಷನ್ 95ರ ಅಡಿಯಲ್ಲಿ ಒಂದು ಸೂಕ್ತವಾದ ತಿದ್ದುಪಡಿಯನ್ನು ತಂದಾಗ ಖಂಡಿತವಾಗಿಯೂ ಬಡವರಿಗಾಗಿ ರೂಪಿಸಿರತಕ್ಕಂಥ ಈ ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಾಗುತ್ತದೆ. ಇವತ್ತು ನಮ್ಮ ಭಾರತೀಯ ಸಂವಿಧಾನವನ್ನು ಎಲ್ಲರೂ ಹೊಗಳುತ್ತಾರೆ. ಸಮಗ್ರ ಚಿಂತನೆಯ ಸಂಜೀವಿನಿ ಎಂದು ಹೆಸರು ಗಳಿಸಿರುವ ಸಂವಿಧಾನವನ್ನು ಹೊಂದಿರುವವರು ನಾವು ಭಾರತೀಯರು. ಆದ್ದರಿಂದ ಬಡವರಿಗೋಸ್ಕರ ಜಾರಿಗೆ ತಂದಿರುವ ಆಶ್ರಯ ಯೋಜನೆ ಅಡಿಯಲ್ಲಿ ಈ ಒಂದು

ಸಣ್ಣ ತಿದ್ದುಪಡಿಯನ್ನು ತಂದು ಜಾರಿ ಮಾಡುವುದಾದರೆ ತುಂಬಾ ಅನುಕೂಲವಾಗುತ್ತದೆ ಮತ್ತು ಈ ಬಗ್ಗೆ ನಾನು ಸರ್ಕಾರವನ್ನು ಪುನಃ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ವೆಂಕಟರಮಣಪ್ಪನವರೇ, ಒಂದು ನಿಮಿಷದಲ್ಲಿ ಹೇಳಬೇಕು.

ವೆಂಕಟರಮಣಪ್ಪ (ಪಾವಗಡ): ಈಗೇನು ಈ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ಯೋಜನೆಯಲ್ಲಿ ಫಲಾನುಭವಿಗಳಿಗೆ ನಾವು ಮಂಜೂರಾತಿಯನ್ನು ಕೊಡುವುದರ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಯಾರು ಹರಿಜನರು-ಗಿರಿಜನರು, ಕಡುಬಡವರು ಇದ್ದಾನೆ, ಅವರಿಗೆ ನೇರವಾಗಿ ನಾವು ಮನೆ ಮಂಜೂರಾತಿ ಮಾಡಿದ ಮೇಲೆ ಅವರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗೆ ಅಲೆದಾಡುವುದರಲ್ಲಿ ತುಂಬಾ ಕಷ್ಟವಾಗುತ್ತದೆ. ಇದರಿಂದಾಗಿ ಅವನಿಗೆ ಕೊಟ್ಟ ಮನೆಯನ್ನು ರದ್ದುಮಾಡಿ ಬೇರೆಯವರಿಗೆ ಕೊಡುವಂಥ ಪರಿಸ್ಥಿತಿ ಬರುತ್ತದೆ. ಇವತ್ತು ಏನು ಹರಿಜನ-ಗಿರಿಜನರು ಊರಿನ ಪಕ್ಕದಲ್ಲಿ ಅರ್ಧ ಎಕರೆ, ಒಂದು-ಎರಡು ಎಕರೆ ಜಮೀನು ಇರತಕ್ಕಂಥವರು ಇರುತ್ತಾರೆ, ಅವರು ಆ ಜಮೀನಿನಲ್ಲೇ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

+ ಶ್ರೀ ಕೆ. ಷಡಕ್ಷರಿ (ತಿಪಟೂರು): ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳ ಬಗ್ಗೆ ಈಗಾಗಲೇ ನಮ್ಮ ಹಿರಿಯ ಸದಸ್ಯರುಗಳು ತಿಳಿಸಿದ್ದಾರೆ. ಆದರೆ ಅದಕ್ಕೆ ಸಂಬಂಧಪಟ್ಟಂತೆ ಈಗ ಕಾಲ ವಿಳಂಬವಾಗುವುದರ ಜೊತೆಗೆ ಮಹಾನಗರ ಪ್ರದೇಶಗಳಲ್ಲಿ ಭೂಪರಿವರ್ತನೆಗೆ ಹಣ ಕಟ್ಟುವುದರ ಜೊತೆಗೆ ಅಭಿವೃದ್ಧಿ ಶುಲ್ಕವನ್ನು ಸುಮಾರು ಮೂರು ಸಾವಿರ ರೂಪಾಯಿಗಳ ಮೇಲೆ ಒಂದು ಗುಂಟೆಗೆ ಕೊಡಬೇಕಾಗುತ್ತದೆ. ಈ ಹಣವನ್ನು ಫಲಾನುಭವಿಗಳು ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಕಾಲ ವಿಳಂಬವಾಗುವುದರ ಜೊತೆಗೆ ಹಣವನ್ನೂ ಕಟ್ಟಬೇಕಾಗಿರತಕ್ಕಂಥ ಅವರು, ಅಂದರೆ ಫಲಾನುಭವಿಗಳು, ಮೂಲ ದಾಖಲಾತಿಗಳನ್ನು ಒದಗಿಸಿ ಪಡೆಯುವುದಕ್ಕೆ ಆಗದೆ ಅದು ಲ್ಯಾಪ್ಸ್ ಆಗಿಹೋಗುತ್ತದೆ. ಆದಕ್ಕಾಗಿ ಇವತ್ತು 95ನೇ ರೆವಿನ್ಯೂ ಆಕ್ಟ್‌ಗೆ ಒಂದು ತಿದ್ದುಪಡಿಯನ್ನು ತಂದು ದಯಮಾಡಿ ಬಡವರ ನೆರವಿಗೆ ಬಂದು ಸಹಾಯ ಮಾಡಬೇಕೆಂದು ನಾನು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯ ಮಿತ್ರರು ಸರ್ಕಾರದ ಗಮನವನ್ನು ಸೆಳೆಯತಕ್ಕ ಸೂಚನೆ ಬಹಳ ಸಾಧುವಾಗಿದೆ. ಅವರಲ್ಲಿ ಬಡವರಿಗೆ ಇರತಕ್ಕ ಕಾಳಜಿಯನ್ನು ಸರ್ಕಾರ ಸಂಪೂರ್ಣವಾಗಿ ಅರ್ಥಮಾಡಿಕೊಂಡಿದೆ. ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಮಟ್ಟಿಗೆ ರೈತರು ತಮ್ಮ ಜಮೀನುಗಳಲ್ಲೇ ಮನೆ ಕಟ್ಟಿಕೊಳ್ಳುವುದರಿಂದ ಕಲಂ 95 : 6(ಎ) ರಂತೆ ಡೀಮ್ಡ್ ಕನ್‌ವರ್ಷನ್ ಅವಕಾಶ ಕಲ್ಪಿಸಿದೆ. ಆದರೆ, ಅವರು ಪೂರ್ಣ ಮಾಹಿತಿ ನೀಡಿ, ಪರಿವರ್ತನಾ ಶುಲ್ಕ ಕಟ್ಟಿ, ಪೂರ್ಣ ವಿವರದೊಂದಿಗೆ ತಹಶೀಲ್ದಾರರಿಗೆ ಮಾಹಿತಿ ನೀಡುವುದು ಕಷ್ಟಾಯವಾಗಿದೆ. ದುರ್ಬಲವರ್ಗದವರಿಗಾಗಿ ಸರ್ಕಾರದ ವಸತಿ ಯೋಜನೆಯನ್ವಯ ಮನೆ ನಿರ್ಮಿಸುವಾಗ ಫಲಾನುಭವಿಗಳು ತಮ್ಮ ಖಾಸಗಿ ಜಮೀನನ್ನು

ಪರಿವರ್ತನೆ ಮಾಡಿಕೊಡಲು ಇರುವ ಅವಕಾಶವನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. ದುರ್ಬಲವರ್ಗದವರು, ಪರಿಶಿಷ್ಟ ಜಾತಿ ಮತ್ತು ವರ್ಗ ಹಾಗೂ ಹಿಂದುಳಿದ ವರ್ಗದ ವಸತಿರಹಿತರಿಗೆ ಅವರ ಸ್ವಂತ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲು ಪರಿವರ್ತನಾ ಶುಲ್ಕ ಮನ್ನಾ ಮಾಡುವ ಬಗ್ಗೆ ಪರಿಶೀಲನೆ ಮಾಡಲಾಗುವುದು.

(ಗೊಂದಲ)

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಕಂದಾಯ ಸಚಿವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಬಡವರ ಪರವಾಗಿ ತೀರ್ಪನ್ನು ಕೊಡುತ್ತಾರೆಂದು ಅಂದುಕೊಂಡಿದ್ದೆ. ಅವರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಗೆ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ಯೋಜನೆಯ ಫಲಾನುಭವಿಗಳನ್ನು ಹೋಲಿಸಿದರೆ ಬಹಳ ಅನ್ಯಾಯವಾಗುತ್ತದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಕೊಡಗಿನಲ್ಲಿ, ಅವರ ಕಾಫಿ ಎಸ್ಟೇಟಿನಲ್ಲಿಯೇ ರೈತರು ಮನೆಗಳನ್ನು ಕಟ್ಟತಕ್ಕ ಸಂದರ್ಭದಲ್ಲಿ 95:6(ಎ) ಗೆ ಡೀಮ್ಡ್ ಕನ್‌ವರ್ಷನ್ ಮಾಡಿ ಏನು ತಿದ್ದುಪಡಿ ತಂದಿದ್ದಾರೆ, ಅದರ ಹಿನ್ನೆಲೆಯಲ್ಲಿ ಇದನ್ನು ಪರಿಶೀಲಿಸುತ್ತೇವೆಂದು ಹೇಳಿದರೆ, ಇದು ಬಹಳ ದುರ್ಬೈವ. ಮಾನ್ಯ ಕಂದಾಯ ಸಚಿವರು ಬಹಳ ನಿರ್ದಿಷ್ಟವಾಗಿ ಹೇಳಬೇಕು. ನೀವು ಈ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಫಲಾನುಭವಿಗಳಿಗೆ ಕಲಂ 95 ರಲ್ಲಿ ಸೂಕ್ತ ತಿದ್ದುಪಡಿ ತಂದು, ಅವರು ಕನ್‌ವರ್ಷನ್ ಮಾಡಿಕೊಳ್ಳಬೇಕಾಗಿಲ್ಲ ಎನ್ನುವ ಬಗ್ಗೆ ತಿದ್ದುಪಡಿ ತರುತ್ತೇವೆನ್ನುವ ಮಾತನ್ನು ದಯಮಾಡಿ ಹೇಳಬೇಕು. ಇಲ್ಲದೇ ಹೋದರೆ, ಬಡವರ ಯೋಜನೆಗಳಿಗೆ ಇಂತಹ ಒಂದು ಸಣ್ಣ ತಿದ್ದುಪಡಿ ತರುವುದಕ್ಕಾಗುವುದಿಲ್ಲವೆಂದರೆ, ಸರ್ಕಾರ ಯಾವ ರೀತಿಯಲ್ಲಿ ಇದರ ನೆರವಿಗೆ ಬರುತ್ತದೆಂದು ಹೇಳುತ್ತದೆ? ದಯವಿಟ್ಟು ಸನ್ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಸನ್ಮಾನ್ಯ ಅಧ್ಯಕ್ಷರೇ, ಡೀಮ್ಡ್ ಕನ್‌ವರ್ಷನ್ ಎಂದು ಹೇಳಿದರೆ, ಅದರೊಳಗೆ ಎಲ್ಲಾ ಅಡಕವಾಗಿದೆ. ಅವರು ಪ್ರಾಮುಖ್ಯರಾಗಿ ಪರಿವರ್ತನಾ ಶುಲ್ಕವನ್ನು ಮನ್ನಾ ಮಾಡಬೇಕೆಂದು ಒತ್ತಾಯವಾಗಿ ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆಂಬುದನ್ನು ಈ ಸದನಕ್ಕೆ ಹೇಳುತ್ತೇನೆ.

(ಆ) ಹಾಸನ ಹಾಲು ಒಕ್ಕೂಟದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ.

+ ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ): ಮಾನ್ಯ ಅಧ್ಯಕ್ಷರೇ, ಹಾಸನ ಹಾಲು ಒಕ್ಕೂಟದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಅಧ್ಯಕ್ಷರೇ, ಮಾನ್ ಶ್ರೀ ಕೆ.ಹೆಚ್. ಹನುಮೇಗೌಡರು ಹಾಸನ ಹಾಲು ಒಕ್ಕೂಟದ ವಿಚಾರದಲ್ಲಿ ಗಮನವನ್ನು ಸೆಳೆದಿದ್ದಾರೆ. ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಅಡಿ ವಿಚಾರಣೆ ಮುಕ್ತಾಯ ಆಗಿದ್ದು, ವಿಚಾರಣಾಧಿಕಾರಿಯಾದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು (ಪಟ್ಟಣ ಬ್ಯಾಂಕು ವಿಭಾಗ) ಕೇಂದ್ರ ಕಛೇರಿ